# ಕರ್ನಾಟಕ ವಿಧಾನ ಪರಿಷತ್ತು

**145ನೇ ಅಧಿವೇಶನ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 807

ಮಾನ್ಯ ಸದಸ್ಯರ ಹೆಸರು: ಶ್ರೀ ಕಾಂತರಾಜ್ (ಬಿಎಂಎಲ್) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ಸಚಿವರು: ಮಾನ್ಯ ಉನ್ನತ ಶಿಕ್ಷಣ ಸಚಿವರು

ಉತ್ತರಿಸಬೇಕಾದ ದಿನಾಂಕ: 20-12-2021

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಗುತ್ತಿಗೆಯಡಿ ಕರ್ತವ್ಯ ನಿರ್ವಹಿಸುತ್ತಿದ್ದ ನೌಕರರನ್ನು ಯಾವ ದಿನಾಂಕದಂದು ಕರ್ತವ್ಯದಿಂದ ಬಿಡುಗಡೆ ಮಾಡಲಾಯಿತು. ಈ ರೀತಿ ಮಾಡಲು ಕಾರಣಗಳೇನು: | ಪ್ರಥಮ ಕುಲಪತಿಯನ್ನು ನೇಮಿಸುವವರೆಗೆ, ಏಕಾತ್ಮಕ ಸ್ವರೂಪದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಸ್ಥಾಪನೆಗೆ ಕ್ರಮಗಳನ್ನು ಕೈಗೊಳ್ಳುವ ಉದ್ದೇಶಕ್ಕಾಗಿ ನೇಮಿಸಲಾಗಿರುವ ವಿಶೇಷಾಧಿಕಾರಿಯು ಕರ್ನಾಟಕ ರಾಜ್ಯ ವಿಶ್ವದಿಯಾಲಯಗಳ (ತಿದ್ದುಪಡಿ) ಅಧಿನಿಯಮ 2019(2019ರ ಕರ್ನಾಟಕ ಅಧಿನಿಯಮ ಸಂಖ್ಯೆ: 15)ರ ಪ್ರಕರಣ 17ರಲ್ಲಿ ಉಪಬಂಧಿಸುವ ಮೇರೆಗೆ, ರಾಜ್ಯ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂತೆ ಅನುಕ್ರಮವಾಗಿ ವಿಶ್ವವಿದ್ಯಾಲಯದ ಮತ್ತು ಕುಲಪತಿಗಳ ಅಂಥ ಅಧಿಕಾರಗಳನ್ನು ಚಲಾಯಿಸಬೇಕಾಗುತ್ತದೆ ಹಾಗೂ ಅಂಥ ಪ್ರಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ. ಆದರೆ ಸರ್ಕಾರವು ಅಂಥ ಅಧಿಕಾರಗಳನ್ನು ನಿರ್ದಿಷ್ಟಪಡಿಸದೇ ಇರದ ಸನ್ನಿವೇಶದಲ್ಲಿ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ ಹಾಗೂ ಸರ್ಕಾರದ ಗಮನಕ್ಕೆ ತಾರದೇ ಮತ್ತು ವೇತನ ಪಾವತಿಗೆ ಹಣಕಾಸಿನ ಅವಕಾಶ ಕಲ್ಪಿಸಿಕೊಳ್ಳದೇ ಅಂದಿನ ವಿಶೇಷಾಧಿಕಾರಿಗಳು ತಾತ್ಕಾಲಿಕ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ನೇಮಿಸಿಕೊಂಡಿರುತ್ತಾರೆ.<br><br>ಮುಂದುವರೆದು, ಬೋಧಕೇತರ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲಾಗಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಆದೇಶಗಳು ಹಾಗೂ ಹೊರ ಗುತ್ತಿಗೆ ಸಂಬಂಧಿ ದಾಖಲೆಗಳಾಗಲೀ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಲಭ್ಯವಿರುವುದಿಲ್ಲ.<br><br>ಖಾಯಂ ನೇಮಕಾತಿಗೆ ಅನ್ವಯವಾಗುವ ಕ್ರಮಪದ್ಧತಿ, ಮೀಸಲಾತಿ ನೀತಿ ಹಾಗೂ ಅರ್ಹತಾ ಷರತ್ತುಗಳನ್ನು ಅನ್ವಯಿಸಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ. ಅಧಿನಿಯಮ 2000ರ ಪ್ರಕರಣ-55ರನ್ವಯ 1 ವರ್ಷದ |

-2

| | | |
|---|---|---|
| | | ಅವಧಿಗೆ ಮೀರದಂತೆ ಮಾತ್ರ ಅರೆಕಾಲಿಕ ಅಥವಾ ಅತಿಥಿ ಬೋಧಕ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಈ ವಿಧಾನ ತಾತ್ಕಾಲಿಕ ಬೋಧಕೇತರ ಹುದ್ದೆಗಳ ನೇಮಕಾತಿಗೂ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ, 1 ವರ್ಷದ ಅವಧಿಯು ಮುಕ್ತಾಯಗೊಂಡ ನಂತರ ಅತಿಥಿ ಉಪನ್ಯಾಸಕರನ್ನು ಬಿಡುಗಡೆಗೊಳಿಸಲಾಗಿದೆ. ಮುಂದುವರೆದು, ನೇಮಕಾತಿಗೆ ಸಂಬಂಧಿಸಿದ ಯಾವುದೇ ದಾಖಲಾತಿಗಳ ಇರದ ಕಾರಣ ಬೋಧಕೇತರ ಸಿಬ್ಬಂದಿಯನ್ನು ದಿನಾಂಕ: 09-11-2020ರಂದು ಬಿಡುಗಡೆಗೊಳಿಸಲಾಗಿದೆ. |
| ಆ) | ಸದರಿ ಗುತ್ತಿಗೆ ನೌಕರರಿಗೆ ಒಂದು ವರ್ಷಕ್ಕೂ ಅಧಿಕ ತಿಂಗಳುಗಳ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹೌದು |
| ಇ) | ಸರ್ಕಾರವು ಈ ಹಿಂದೆ ಸದನದಲ್ಲಿ ವೇತನ ನೀಡುವುದಾಗಿ ಭರವಸೆ ನೀಡಿರುವುದು ನಿಜವೇ: ಇಲ್ಲಿಯವರೆಗೂ ವೇತನ ನೀಡದಿರಲು ಕಾರಣಗಳೇನು: ಇವರಿಗೆ ಯಾವಾಗ ವೇತನ ಪಾವತಿಸಲಾಗುವುದು? | ಬೋಧಕ/ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿಯಾಗದ ಬಗ್ಗೆ ಸರ್ಕಾರದ ಗಮನಕ್ಕೆ ಬಂದ ತಕ್ಷಣ, ಅವರ ವೇತನ ಪಾವತಿಯ ನಿಟ್ಟಿನಲ್ಲಿ ಉಪಕ್ರಮಿಸಲಾಗಿದೆ ಎಂದು ಮಾತ್ರ ಸದನದಲ್ಲಿ ತಿಳಿಸಲಾಗಿತ್ತು. ವೇತನ ಪಾವತಿಗಾಗಿ ಅನುದಾನ ಒದಗಿಸುವ ಕುರಿತು ಆರ್ಥಿಕ ಇಲಾಖೆ ಹಾಗೂ ಉನ್ನತ ಶಿಕ್ಷಣ ಇಲಾಖೆಯ ಯೋಜನಾ ಶಾಖೆಯೊಂದಿಗೆ ಸಮಾಲೋಚಿಸಲಾಗುತ್ತಿದೆ.<br>ಕೋವಿಡ್-19 ಮಾರಕ ರೋಗದ ಪ್ರಸರಣೆಯಿಂದಾಗಿ ಎದುರಾಗಿರುವ ಆರ್ಥಿಕ ಸವಾಲುಗಳ ಹಿನ್ನೆಲೆಯಲ್ಲಿ ಬಾಕಿ ವೇತನ ಪಾವತಿಗೆ ಕಾಲಮಿತಿ ನಿಗದಿಪಡಿಸುವುದು ಕಷ್ಟಸಾಧ್ಯವಾಗುತ್ತದೆ. |

ಸಂಖ್ಯೆ: ಇಡಿ/321/ಯುಆರ್‌ಸಿ/2021

(ಡಾ॥ ಅಶ್ವಥ್‌ನಾರಾಯಣ ಸಿ.ಎನ್)

ಉನ್ನತ ಶಿಕ್ಷಣ, ಐಟಿ ಮತ್ತು ಬಿಟಿ, ವಿಜ್ಞಾನ ಮತ್ತು

ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು

ಜೀವನೋಪಾಯ ಇಲಾಖೆಗಳ ಸಚಿವರು